**ಸಾಮಾಜಿಕ ಅರಣ್ಯ ಇಲಾಖೆ:**

ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಮಾತನಾಡುತ್ತಾ, 2011-12ನೇ ಸಾಲಿಗೆ ನಿಗದಿಪಡಿಸಿದ್ದ ಅನುದಾನವನ್ನು ಪೂರ್ಣವಾಗಿ ವಿನಿಯೋಗಿಸಲಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 1400000 ಲಕ್ಷ ಸಸಿಗಳನ್ನು ಬೆಳೆಸಲಾಗಿದ್ದು, ಜೂನ್-ಜುಲೈ ಮಾಹೆಯಲ್ಲಿ ಫಲಾನುಭವಿಗಳಿಗೆ ವಿತರಿಸಲು ಕ್ರಮ ವಹಿಸಲಾಗುವುದು ಎಂದು ಸಭೆಗೆ ವಿವರ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಜಿಲ್ಲೆಯಲ್ಲಿ ನೆಡುತೋಪುಗಳನ್ನು ಮಾಡುವ ಬಗ್ಗೆ ಸೂಕ್ತ ಸ್ಥಳಗಳನ್ನು ಆಯ್ಕೆ ಮಾಡಿ ಸಸಿಗಳನ್ನು ನೆಡಲು ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಿದರು ಮತ್ತು ವಿಶೇಷ ಅಭಿವೃದ್ಧಿ ಯೋಜನೆಯಡಿ ಲಭ್ಯವಿರುವ ಅನುದಾನವನ್ನು ಸಮರ್ಪಕವಾಗಿ ವಿನಿಯೋಗಿಸಲು ಕ್ರಮ ವಹಿಸುವಂತೆ ತಿಳಿಸಿದರು.

**ಕೈಮಗ್ಗ ಮತ್ತು ಜವಳಿ ಇಲಾಖೆ:**

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ನೇಕಾರರ ಸಂಘಗಳಿಗೆ ಸಹಾಯಧನವನ್ನು ನೀಡುವಂತಹ ಯೋಜನೆಗಳಿದ್ದಲ್ಲಿ ಜಿಲ್ಲಾ ಪಂಚಾಯಿತಿ ಸದಸ್ಯರ ಗಮನಕ್ಕೆ ತಂದು ಕ್ರಮ ವಹಿಸಬೇಕೆಂದು ತಿಳಿಸಿದರು.

**ರೇಷ್ಮೆ ಇಲಾಖೆ:**

ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನ ಇವರು ಮಾತನಾಡುತ್ತಾ, 2011-12ನೇ ಸಾಲಿಗೆ ವಿವಿಧ ಯೋಜನೆಗಳಿಗೆ ನಿಗದಿಪಡಿಸಿದ ಅನುದಾನವನ್ನು ಸಂಪೂರ್ಣವಾಗಿ ವಿನಿಯೋಗಿಸಲಾಗಿದೆ. 2012-13ನೇ ಸಾಲಿಗೆ ಇಲಾಖಾ ಕಾರ್ಯಕ್ರಮಗಳಿಗೆ ಒಟ್ಟು ರೂ.29.00ಲಕ್ಷಗಳನ್ನು ನಿಗದಿಪಡಿಸಿದ್ದು, ಪ್ರಸಕ್ತ ಸಾಲಿನಲ್ಲಿ ಬಯೋಟೆನ್ ಬೆಳೆಯುವ ರೈತರಿಗೆ ನೇರವಾಗಿ ಪ್ರತಿ ಕೆ.ಜಿಗೆ ರೂ.40.00ರಂತೆ ಸಹಾಯಧನವನ್ನು ಕೆಲವು ಮಾನದಂಡಗಳನ್ನು ವಿಧಿಸಿ ನೀಡಲು ಕ್ರಮ ವಹಿಸಲಾಗುವುದು ಎಂದು ಸಭೆಗೆ ವಿವರ ನೀಡಿದರು. ನಿಗದಿಪಡಿಸಿರುವ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಮುಂದಿನ ಸಭೆಗೆ ಮಂಡಿಸಲಾಗುವುದೆಂದು ವಿವರ ನೀಡಿದರು.

**ಕೈಗಾರಿಕೆ ಇಲಾಖೆ:**

ಸಭೆಯಲ್ಲಿ ಹಾಜರಿದ್ದ ಕೈಗಾರಿಕೆ ಇಲಾಖೆಯ ಪ್ರತಿನಿಧಿಯವರು ಮಾತನಾಡುತ್ತಾ, 2011-12ನೇ ಸಾಲಿಗೆ ನಿಗದಿಪಡಿಸಿದ ಅನುದಾನವನ್ನು ಅನುಮೋದಿತ ಕ್ರಿಯಾ ಯೋಜನೆಯಂತೆ ವಿನಿಯೋಗಿಸಲಾಗಿದೆ. 2012-13ನೇ ಸಾಲಿಗೆ ಒಟ್ಟು ರೂ.14.00ಲಕ್ಷಗಳನ್ನು ನಿಗದಿಪಡಿಸಿದ್ದು, ದಸರಾ ವಸ್ತುಪ್ರದರ್ಶನ, ಔದ್ಯಮೀಕರಣ ಮತ್ತು ಇತರೆ ನಿಗದಿತ ಯೋಜನೆಗಳಿಗೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಮುಂದಿನ ಸ್ಥಾಯಿ ಸಮಿತಿ ಸಭೆಯಲ್ಲಿ ಅನುಮೋದನೆಗೆ ಮಂಡಿಸಲು ಕ್ರಮ ವಹಿಸುವುದಾಗಿ ವಿವರ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಜಿಲ್ಲೆಯಲ್ಲಿರುವ ಸಣ್ಣ ಉದ್ಯಮಗಳ ವಿವರಗಳನ್ನು ನೀಡಬೇಕೆಂದು ತಿಳಿಸಿದರು ಮತ್ತು ಸಣ್ಣ ಉದ್ಯಮಗಳಿಗೆ ಸಹಾಯಧನ ನೀಡುವಂತಹ ಯೋಜನೆಗಳಿದ್ದಲ್ಲಿ ಆದ್ಯತೆ ಮೇಲೆ ಕ್ರಮ ವಹಿಸಬೇಕೆಂದು ತಿಳಿಸಿದರು.

**ಜಲಾನಯನ ಅಭಿವೃದ್ಧಿ ಇಲಾಖೆ:**

ಜಲಾನಯನ ಅಭಿವೃದ್ಧಿ ಅಧಿಕಾರಿಯವರು ಮಾತನಾಡುತ್ತಾ, 2011-12ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗೆ ಬಿಡುಗಡೆಯಾದ ಅನುದಾನ ಮತ್ತು ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನವನ್ನು ವಿನಿಯೋಗಿಸಿ ಫಲಾನುಭವಿಗಳಿಗೆ ವಿವಿಧ ಸವಲತ್ತುಗಳನ್ನು ನೀಡಲಾಗಿದೆ ಎಂದು ಸಭೆಗೆ ವಿವರ ನೀಡಿದರು.

1. ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಜಲಾನಯನ ಅಭಿವೃದ್ಧಿ ಇಲಾಖೆಯ ವತಿಯಿಂದ ವಿತರಿಸುವ ಹಣ್ಣಿನ ಸಸಿಗಳಿಗೆ ಸಂಬಂಧಿಸಿದಂತೆ, ಉತ್ತಮ ತಳಿಯ ಹಣ್ಣಿನ ಸಸಿಗಳನ್ನು ರೈತರಿಗೆ ನೀಡಲು ಕ್ರಮ ವಹಿಸಬೇಕೆಂದು ತಿ ಳಿಸಿದರು.

ಮತ್ತ್ಯಾವುದೇ ವಿಷಯಗಳು ಚರ್ಚೆಗೆ ಬಾರದ ಹಿನ್ನೆಲೆಯಲ್ಲಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಹುಚ್ಚೇಗೌಡ)
ಅಧ್ಯಕ್ಷರು,
ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯಿತಿ, ಹಾಸನ.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಜಿಲ್ಲೆಯಲ್ಲಿ ರೈತರಿಂದ ಬೇಡಿಕೆಯಿರುವ ರಸಗೊಬ್ಬರ ಲಭ್ಯವಿದೆಯೇ? ಎಂಬ ಬಗ್ಗೆ ವಿವರ ನೀಡಬೇಕೆಂದು ತಿಳಿಸಿದರು.

ಜಂಟಿ ಕೃಷಿ ನಿರ್ದೇಶಕರು ಮಾತನಾಡುತ್ತಾ, ಹಾಸನ ಜಿಲ್ಲೆಯಲ್ಲಿ ಫ್ಯಾಕ್ಟ್ 20:20 ರಸಗೊಬ್ಬರದ ಬೇಡಿಕೆ ಹೆಚ್ಚು ಇರುತ್ತದೆ. ಬೇರೆ ಕಂಪನಿಯ 20:20 ರಸಗೊಬ್ಬರ ಲಭ್ಯವಿರುತ್ತದೆ. ಫ್ಯಾಕ್ಟ್ 20:20 ರಸಗೊಬ್ಬರ 2500 ಮೆ.ಟನ್ ಜಿಲ್ಲೆಗೆ ಬಂದಿದ್ದು, ಸಹಕಾರ ಮಹಾಮಂಡಳದಲ್ಲಿ ಅನುದಾನ ಲಭ್ಯವಿಲ್ಲದ ಕಾರಣ, ಜಿಲ್ಲೆಗೆ ಬಂದಿರುವ ಫ್ಯಾಕ್ಟ್ 20:20 ರಸಗೊಬ್ಬರವನ್ನು ಖಾಸಗಿಯವರು ಎತ್ತುವಳಿ ಮಾಡಿರುತ್ತಾರೆ. ರಸಗೊಬ್ಬರವನ್ನು ಎಂ.ಆರ್.ಪಿ ದರದಲ್ಲಿಯೇ ಮಾರಾಟ ಬೇಕಾಗಿರುತ್ತದೆ. ಆದರೆ, ರಸಗೊಬ್ಬರದ ಬೆಲೆ ಬಹಳ ದುಬಾರಿಯಾಗಿರುತ್ತದೆ ಎಂದು ಸಭೆಗೆ ವಿವರ ನೀಡಿದರು.

ಮುಂದುವರೆದು, ಸುವರ್ಣ ಭೂಮಿ ಯೋಜನೆಯಡಿ ಮೊದಲನೇ ಕಂತಿನ ಅನುದಾನವನ್ನು 17100 ಫಲಾನುಭವಿಗಳ ಖಾತೆಗೆ ಹಣವನ್ನು ಜಮೆ ಮಾಡಲಾಗಿದೆ. ಎರಡನೇ ಕಂತಿನ ಅನುದಾನವನ್ನು ನೀಡುವಾಗ 3ನೇ ವ್ಯಕ್ತಿಯಿಂದ ತಪಾಸಣೆ ನಡೆಸಿ ಅರ್ಹರಿದ್ದಲ್ಲಿ ಮಾತ್ರ ಹಣವನ್ನು ಜಮೆ ಮಾಡುವಂತೆ ನಿರ್ದೇಶನವಿದ್ದು, ಅದರಂತೆ, ಜಿಲ್ಲೆಯಲ್ಲಿ ಶೇ.95ರಷ್ಟು ಫಲಾನುಭವಿಗಳೆ ಅರ್ಹರಿದ್ದು, ಈಗಾಗಲೇ 8000 ಫಲಾನುಭವಿಗಳಿಗೆ ಹಣವನ್ನು ಅವರ ಖಾತೆಗೆ ಜಮೆ ಮಾಡಲಾಗಿದೆ. ಸರ್ಕಾರದಿಂದ ಅನುದಾನ ಬಿಡುಗಡೆಯಾದ ನಂತರ ಉಳಿದ ಫಲಾನುಭವಿಗಳಿಗೆ ಹಣವನ್ನು ನೀಡಲು ಕ್ರಮ ವಹಿಸಲಾಗುವುದು ಎಂದು ವಿವರ ನೀಡಿದರು.

2012-13ನೇ ಸಾಲಿಗೆ ಕಟ್ಟಡಗಳು ಯೋಜನೆಯಡಿಯಲ್ಲಿ ರೂ.25.00ಲಕ್ಷಗಳನ್ನು ನಿಗದಿಪಡಿಸಿದ್ದು, ಅದರಲ್ಲಿ ಆಲೂರು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಕಟ್ಟಡದ ನಿರ್ಮಾಣವನ್ನು ಕಡ್ಡಾಯವಾಗಿ ಮಾಡುವ ಷರತ್ತನ್ನು ಹಾಕಿರುತ್ತಾರೆ. ಆದ್ದರಿಂದ, ಪ್ರಸ್ತುತ ಸಾಲಿನಲ್ಲಿ ಹೊಸದಾಗಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಬೇಕೆಂದು ಕೋರಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಬಾಗೇಶಪುರದಲ್ಲಿ ಬೀಜ ವಿತರಣೆಗೆ ಮಳಿಗೆಯೊಂದನ್ನು ನಿರ್ಮಿಸಿದ್ದು, ಪ್ರಸ್ತುತ ಸಾಲಿನಿಂದ ಸದರಿ ಮಳಿಗೆಯಲ್ಲಿಯೇ ರೈತರಿಗೆ ವಿವಿಧ ಬೀಜಗಳನ್ನು ವಿತರಣೆ ಮಾಡಲು ಕ್ರಮ ವಹಿಸಬೇಕೆಂದು ಜಂಟಿ ನಿರ್ದೇಶಕರಿಗೆ ತಿಳಿಸಿದರು.

**ತೋಟಗಾರಿಕೆ ಇಲಾಖೆ:**

ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆರವರು ಮಾತನಾಡುತ್ತಾ, 2011-12ನೇ ಸಾಲಿಗೆ ನಿಗದಿಪಡಿಸಿದ ಅನುದಾನವನ್ನು ಪೂರ್ಣವಾಗಿ ವಿನಿಯೋಗಿಸಲಾಗಿದೆ ಎಂದು ವಿವರ ನೀಡಿದರು.

ಮಾನ್ಯ ಉಪಾಧ್ಯಕ್ಷರು ಮಾತನಾಡುತ್ತಾ, ಸಕಲೇಶಪುರ ತಾ; ಬಾಗೆ ಗ್ರಾಮದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬೆಳೆಸಿರುವ ಅಡಿಕೆ ಸಸಿಗಳನ್ನು 2012-13ನೇ ಸಾಲಿನಲ್ಲಿ ಬೇಡಿಕೆಯಿರುವ ತಾಲ್ಲೂಕಿಗೆ ನೀಡಲು ಕ್ರಮ ವಹಿಸಬೇಕೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಬಿ.ಎ.ನಂಜುಂಡಸ್ವಾಮಿರವರು ಮಾತನಾಡುತ್ತಾ, ಅಡಿಕೆ ಸಸಿಗಳನ್ನು ಬೇಡಿಕೆಯಿರುವ ತಾಲ್ಲೂಕಿಗೆ ನೀಡಲು ಕ್ರಮ ವಹಿಸಬೇಕೆಂದು ಮತ್ತು ಗೊರೂರಿನಲ್ಲಿರುವ ತೋಟಗಾರಿಕೆ ಇಲಾಖೆಯ ಫಾರಂ ಸುಟ್ಟುಹೋಗಿದ್ದು, ಈ ಬಗ್ಗೆ ಅಗತ್ಯ ಕ್ರಮ ವಹಿಸಬೇಕೆಂದು ಕೋರಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಗೊರೂರಿನಲ್ಲಿರುವ ತೋಟಗಾರಿಕೆ ಇಲಾಖೆಯ ಜಾಗವು ತೋಟಗಾರಿಕೆ ಇಲಾಖೆಗೆ ಸೇರಿದೆಯೇ ಎಂಬ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ಸದರಿ ಜಾಗವನ್ನು ಇಲಾಖೆ ವಶಕ್ಕೆ ಪಡೆಯುವ ಬಗ್ಗೆ ಕ್ರಮ ವಹಿಸಬೇಕೆಂದು ತಿಳಿಸಿದರು. ಮತ್ತು ಜಿಲ್ಲೆಯಲ್ಲಿರುವ ತೋಟಗಾರಿಕೆ ಇಲಾಖೆಯ ಜಾಗಗಳು ಇಲಾಖೆಯ ವಶದಲ್ಲಿವೆಯೇ ಎಂಬ ಬಗ್ಗೆ ಪರಿಶೀಲಿಸಿ, ಒಂದು ವೇಳೆ ಇಲಾಖೆಯ ವಶದಲ್ಲಿ ಇಲ್ಲದಿದ್ದರೆ ಇಲಾಖೆಯ ವಶಕ್ಕೆ ಪಡೆಯಲು ಎಲ್ಲಾ ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಿದರು.

**ಮೀನುಗಾರಿಕೆ ಇಲಾಖೆ:**

ಸಭೆಯಲ್ಲಿ ಹಾಜರಿದ್ದ ಇಲಾಖಾ ಪ್ರತಿನಿಧಿಯವರು ಮಾತನಾಡುತ್ತಾ, 2011-12ನೇ ಸಾಲಿಗೆ ನಿಗದಿಯಾಗಿದ್ದ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ವಿನಿಯೋಗಿಸಲಾಗಿದೆ ಮತ್ತು 2012-13ನೇ ಸಾಲಿಗೆ ನಿಗದಿಪಡಿಸಿರುವ ಅನುದಾನಕ್ಕೆ ಸಂಬಂಧಿಸಿದಂತೆ, ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಮುಂದಿನ ಸಭೆಗೆ ಮಂಡಿಸಲಾಗುವುದು ಎಂದು ವಿವರ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಗೊರೂರಿನಲ್ಲಿರುವ ಮೀನುಗಾರಿಕೆ ಇಲಾಖೆಯ ಕಛೇರಿಯ ಸುತ್ತಮುತ್ತಲಿನ ಜಂಗಲ್ ಕಡಿಸಿ ಸ್ವಚ್ಛಗೊಳಿಸಲಾಗಿದೆ. ಅಲ್ಲಿರುವ ತೊಟ್ಟಿಗಳನ್ನು ಅಭಿವೃದ್ಧಿಪಡಿಸಿದಲ್ಲಿ ಎಲ್ಲಾ ತಾಲ್ಲೂಕುಗಳಿಗೆ ಮೀನುಮರಿಗಳನ್ನು ಸರಬರಾಜು ಮಾಡಬಹುದಾಗಿದೆ. ಆದ್ದರಿಂದ, ನೀರಿನ ವ್ಯವಸ್ಥೆ ಮಾಡಿ ಮೀನುಮರಿ ಸಾಕಾಣಿಕಾ ತೊಟ್ಟಿಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಬಗ್ಗೆ ಪ್ರಸ್ತಾವನೆಯನ್ನು ಸಿದ್ಧಪಡಿಸಿ ವಿಶೇಷ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲು ಕ್ರಮ ವಹಿಸಬೇಕೆಂದು ತಿಳಿಸಿದರು.

| | | | |
|---|---|---|---|
| 5 | 2403-00-101-0-30<br>ವಿಸ್ತರಣಾ ಘಟಕಗಳ ಬಲಪಡಿಸುವಿಕೆ | | 5.00 |
| | ಒಟ್ಟು | | 83.00 |

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಇಲಾಖಾ ಕಟ್ಟಡಗಳಿಗೆ ಸಂಬಂಧಿಸಿದಂತೆ, ಎಷ್ಟು ಪಶು ಚಿಕಿತ್ಸಾಲಯಗಳಿಗೆ ಸ್ವಂತ ಕಟ್ಟಡಗಳಿವೆ, ಎಷ್ಟು ಚಿಕಿತ್ಸಾಲಯಗಳಿಗೆ ಸ್ವಂತ ಕಟ್ಟಡಗಳಿಲ್ಲ ಮತ್ತು ಸ್ವಂತ ಕಟ್ಟಡಗಳಲ್ಲಿ ಎಷ್ಟು ಕಟ್ಟಡಗಳನ್ನು ದುರಸ್ಥಿಪಡಿಸಬೇಕಾಗಿದೆ ಎಂಬ ಬಗ್ಗೆ ಪೂರ್ಣ ವಿವರಗಳನ್ನು ಸಲ್ಲಿಸುವಂತೆ ಉಪ ನಿರ್ದೇಶಕರಿಗೆ ತಿಳಿಸಿದರು. ದುರಸ್ಥಿಪಡಿಸಬೇಕಾಗಿರುವ ಕಟ್ಟಡಗಳಲ್ಲಿ ಅತ್ಯಂತ ಅವಶ್ಯವಾಗಿ ದುರಸ್ಥಿಪಡಿಸಬೇಕಾಗಿರುವ ಕಟ್ಟಡಗಳ ಪಟ್ಟಿಯನ್ನು ನೀಡಿದಲ್ಲಿ 2012-13ನೇ ಸಾಲಿನಲ್ಲಿ ಕಟ್ಟಡಗಳು ಯೋಜನೆಗೆ ನಿಗದಿಪಡಿಸಿರುವ ಅನುದಾನದಲ್ಲಿ ದುರಸ್ಥಿಪಡಿಸುವ ಬಗ್ಗೆ ಜಿಲ್ಲಾ ಪಂಚಾಯಿತಿ ಸದಸ್ಯರಿಗೆ ಮನವರಿಕೆ ಮಾಡಿಕೊಟ್ಟು ಕ್ರಿಯಾ ಯೋಜನೆಯಲ್ಲಿ ಸೇರಿಸುವ ಬಗ್ಗೆ ಕ್ರಮ ವಹಿಸಲಾಗುವುದೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ವಿ.ಎ.ನಂಜುಂಡಸ್ವಾಮಿರವರು ಮಾತನಾಡುತ್ತಾ, ಬೈಚನಹಳ್ಳಿ ಗ್ರಾಮದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜೀವ್ ಗಾಂಧಿ ಮಾಹಿತಿ ಸೇವಾ ಕೇಂದ್ರದ ಕಟ್ಟಡಕ್ಕೆ ತಳಪಾಯವನ್ನು ಹಾಕಿ ಹಾಗೆಯೇ ಬಿಟ್ಟಿರುತ್ತಾರೆ. ಬೈಚನಹಳ್ಳಿಯಲ್ಲಿರುವ ಪಶು ಚಿಕಿತ್ಸಾ ಕೇಂದ್ರದ ಕಟ್ಟಡವು ತುಂಬಾ ಹಳೆಯದಾಗಿದ್ದು, ಹೊಸದಾಗಿ ಕಟ್ಟಡವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜೀವ್ ಗಾಂಧಿ ಮಾಹಿತಿ ಸೇವಾ ಕೇಂದ್ರದ ಕಟ್ಟಡಕ್ಕೆ ತಳಪಾಯ ಹಾಕಿ ಬಿಟ್ಟಿರುವ ಸ್ಥಳದಲ್ಲಿಯೇ ನಿರ್ಮಿಸುವುದು ಸೂಕ್ತವಿದ್ದು, ಈ ಬಗ್ಗೆ ಅಗತ್ಯ ಕ್ರಮ ವಹಿಸಬೇಕೆಂದು ಕೋರಿದರು.

ಮಾನ್ಯ ಉಪಾಧ್ಯಕ್ಷರು ಮಾತಾಡುತ್ತಾ, ಸಕಲೇಶಪುರ ಪಟ್ಟಣದಲ್ಲಿರುವ ಪಶುಚಿಕಿತ್ಸಾ ಕೇಂದ್ರದ ಕಟ್ಟಡಕ್ಕೆ ಕಾಂಪೌಂಡ್ ಇರುವುದಿಲ್ಲ. ಕಾಂಪೌಂಡ್ ನಿರ್ಮಾಣ ಮಾಡುವ ಬಗ್ಗೆ ಅಗತ್ಯ ಕ್ರಮ ವಹಿಸಬೇಕೆಂದು ಕೋರಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಜಯಶೀಲ ಜಯಶಂಕರ್‌ರವರು ಮಾತನಾಡುತ್ತಾ, ಬೇಲೂರು ತಾ: ಹೊಸಮನೆಹಳ್ಳಿಯಲ್ಲಿ ತಾತ್ಕಾಲಿಕವಾಗಿ ಪಶು ಚಿಕಿತ್ಸಾ ಕೇಂದ್ರವನ್ನು ತೆರೆದಲ್ಲಿ ಅಲ್ಲಿನ ಸುತ್ತಮುತ್ತಲಿನ ಗ್ರಾಮಗಳ ಜಾನುವಾರುಗಳಿಗೆ ಚಿಕಿತ್ಸೆಯನ್ನು ನೀಡಲು ಅನುಕೂಲವಾಗುತ್ತದೆ. ಆದ್ದರಿಂದ, ಹೊಸಮನೆಹಳ್ಳಿಯಲ್ಲಿ ತಾತ್ಕಾಲಿಕವಾಗಿ ಪಶು ಚಿಕಿತ್ಸಾ ಕೇಂದ್ರವನ್ನು ತೆರೆಯಬೇಕೆಂದು ಕೋರಿದರು.

2 **ಕೃಷಿ ಇಲಾಖೆ:**

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, 2011-12ನೇ ಸಾಲಿನ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ವಿವರಗಳನ್ನು , ಸುವರ್ಣ ಭೂಮಿ ಮತ್ತು ರಸಗೊಬ್ಬರದ ವಿವರಗಳನ್ನು ನೀಡುವಂತೆ ತಿಳಿಸಿದರು.

ಜಂಟಿ ಕೃಷಿ ನಿರ್ದೇಶಕರು ಮಾತನಾಡುತ್ತಾ, 2011-12ನೇ ಸಾಲಿಗೆ ವಿವಿಧ ಯೋಜನೆಗಳಿಗೆ ನಿಗಧಿಪಡಿಸಿ/ ಬಿಡುಗಡೆಯಾದ ಅನುದಾನವನ್ನು ವಿನಿಯೋಗಿಸಿ ಶೇ. 90ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ ಎಂದು ವಿವರ ನೀಡಿದರು. 2012-13ನೇ ಸಾಲಿನ ಮುಂಗಾರು ಹಂಗಾಮಿಗೆ ಸಂಬಂಧಿಸಿದಂತೆ, ಜಿಲ್ಲೆಗೆ 1,16,280 ಮೆ.ಟನ್ ರಸಗೊಬ್ಬರ ಹಂಚಿಕೆಯಾಗಿರುತ್ತದೆ. ಜಿಲ್ಲೆಯಲ್ಲಿ ಸುಮಾರು 36000 ಮೆ.ಟನ್ ರಸಗೊಬ್ಬರದ ದಾಸ್ತನು ಇರುತ್ತದೆ. ರಸಗೊಬ್ಬರವನ್ನು ಸಹಕಾರ ಸಂಘಗಳು ಎತ್ತುವಳಿ ಮಾಡುತ್ತಿವೆಯೆಂದು ವಿವರ ನೀಡಿದರು.

1

(1)

# ದಿನಾಂಕ: 19-04-2012ರಂದು ಪೂರ್ವಾಹ್ನ: 11-00 ಗಂಟೆಗೆ ಹೊಯ್ಸಳ ಸಭಾಂಗಣ, ಹಾಸನ ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

ಅಧ್ಯಕ್ಷತೆ: ಶ್ರೀ ಹುಚ್ಚೇಗೌಡ,
ಅಧ್ಯಕ್ಷರು,
ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ.

ಹಾಜರಿ :07 ಗೈರು ಹಾಜರಿ:00

<table>
<tr><th>ಕ್ರಸಂ</th><th>ವಿಷಯ</th><th>ಚರ್ಚೆ</th><th>ತೀರ್ಮಾನ</th></tr>
<tr><td></td><td></td><td>ಸಹಾಯಕ ಕಾರ್ಯದರ್ಶಿ(ಅಭಿವೃದ್ಧಿ)ರವರು ಸಭೆಗೆ ಹಾಜರಿದ್ದ ಮಾನ್ಯ ಅಧ್ಯಕ್ಷರು, ಸಮಿತಿ ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು.</td><td></td></tr>
<tr><td>1</td><td>2012-13ನೇ ಸಾಲಿನ ಕ್ರಿಯಾ ಯೋಜನೆಯ ಅನುಮೋದನೆ ನೀಡುವ ಬಗ್ಗೆ.</td><td>ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3) ಪಶುಪಾಲನೆ/2011-12 ದಿನಾಂಕ: 18-04-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಲಿಂಕ್ ಡಾಕ್ಯುಮೆಂಟಿನಲ್ಲಿ ನಿಗದಿಪಡಿಸಿರುವ ಅನುದಾನಕ್ಕೆ ಸೀಮಿತಗೊಳಿಸಿ ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಕೋರಿರುತ್ತಾರೆ.<br>1. <u>ಪಶುಪಾಲನೆ ಇಲಾಖೆ:</u><br>ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಇಲಾಖೆಯ ಯೋಜನೆಗಳ ಬಗ್ಗೆ ವಿವರಗಳನ್ನು ಸಭೆಗೆ ಈ ಕೆಳಕಂಡಂತೆ ನೀಡಿದರು
<table>
<tr><th>ಕ್ರಸಂ</th><th>ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು</th><th>ನಿಗದಿತ ಅನುದಾನ (ಲಕ್ಷ ರೂಗಳಲ್ಲಿ)</th></tr>
<tr><td>1</td><td>2403-00-101-0-28<br>ಕಟ್ಟಡಗಳು</td><td>20.00</td></tr>
<tr><td>2</td><td>2403-00-101-0-29<br>ಜಾನುವಾರು ಆಸ್ಪತ್ರೆಯಲ್ಲಿ ಪಾಲಿಕ್ಲಿನಿಕ್ ಸ್ಥಾಪನೆ</td><td>4.00</td></tr>
<tr><td>3</td><td>2403-00-101-0-27<br>ಔಷಧಗಳು, ರಾಸಾಯನಿಕ ಪದಾರ್ಥಗಳು ಮತ್ತು ಸಾಮಗ್ರಿಗಳ ಸರಬರಾಜು</td><td>50.00</td></tr>
<tr><td>4</td><td>2403-00-101-0-31<br>ಗಿರಿರಾಜ ಹಾಗೂ ಇತರೆ ಹಕ್ಕಿಗಳ ಸಾಕಾಣೆ</td><td>4.00</td></tr>
</table></td><td>ಪಶುಪಾಲನಾ ಇಲಾಖೆಯ ವಿವಿಧ ಕಾರ್ಯಕ್ರಮಗಳ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು. ಹಾಗೂ ಕಟ್ಟಡಗಳು ಯೋಜನೆಯನ್ನು ಹೊರತುಪಡಿಸಿ ಉಳಿದ ಯೋಜನೆಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>ಮಾನ್ಯ ಸದಸ್ಯರು ಕೋರಿದಂತೆ, ಬೇಲೂರು ತಾ; ಹೊಸಮನೆಹಳ್ಳಿ ಗ್ರಾಮದಲ್ಲಿ ತಾತ್ಕಾಲಿಕವಾಗಿ ಪಶು ಚಿಕಿತ್ಸಾ ಉಪಕೇಂದ್ರವನ್ನು ತೆರೆಯಲು ಮತ್ತು ವಾರದಲ್ಲಿ 2 ದಿನ ಕರ್ತವ್ಯ ನಿರ್ವಹಿಸುವಂತೆ ತಿಳಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.</td></tr>
</table>

6) ಶ್ರೀಮತಿ ವಿ.ಪಿ.ಜ್ಯೋತಿ, ಸದಸ್ಯರು
7) ಶ್ರೀಮತಿ ಸರೋಜಮ್ಮ, ಸದಸ್ಯರು
8) ಮಾನ್ಯ ಅಧ್ಯಕ್ಷರು / ಉಪಾಧ್ಯಕ್ಷರು ಜಿಲ್ಲಾ ಪಂಚಾಯತ್, ಹಾಸನ ರವರ ಆಪ್ತ ಶಾಖೆಗೆ.
9) ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರುಗಳಿಗೆ ಮಾಹಿತಿಗಾಗಿ.
10) ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ ರವರ ಆಪ್ತ ಶಾಖೆಗೆ ಮಾಹಿತಿಗಾಗಿ.
11) ಉಪ ಕಾರ್ಯದರ್ಶಿ (ಆಡಳಿತ) / ಮುಖ್ಯ ಲೆಕ್ಕಾಧಿಕಾರಿ / ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಹಾಸನ ರವರ ಆಪ್ತ ಶಾಖೆಗೆ ಮಾಹಿತಿಗಾಗಿ.
12) ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಹಾಸನ
13) ಹಿರಿಯ ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಹಾಸನ
14) ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ, ಹಾಸನ.
15) ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಲಾನಯನ ಇಲಾಖೆ, ಹಾಸನ
16) ಉಪ ನಿರ್ದೇಶಕರು, ತೋಟಗಾರಿಕೆ / ಕೈಮಗ್ಗ ಮತ್ತು ಜವಳಿ/ ರೇಷ್ಮೆ ಇಲಾಖೆ / ಪಶುಪಾಲನಾ ಇಲಾಖೆ / ಕೈಗಾರಿಕೆ ಇಲಾಖೆ, ಹಾಸನ.
17) ಸಹಕಾರ ಸಂಘಗಳ ಉಪ ನಿಬಂಧಕರು, ಹಾಸನ.

(12–17:) ಸಭೆಗೆ ಮಂಡಿಸುವ ಯಾವುದೇ ಇಲಾಖಾ ಪ್ರಸ್ತಾವನೆಗಳು ಇದ್ದಲ್ಲಿ ಅವುಗಳನ್ನು ಜಿಲ್ಲಾ ಪಂಚಾಯತ್ ಅಭಿವೃದ್ಧಿ ಶಾಖೆಗೆ ದಿನಾಂಕ 16-04-2012 ರೊಳಗಾಗಿ ಸಲ್ಲಿಸುವುದು.

# ಜಿಲ್ಲಾ ಪಂಚಾಯತ್, ಹಾಸನ.

ಸಂ/ಜಿಪಂಹಾ/ಅಭಿ(3)/13/ಕೃಕೈಸ/2012-13 ದಿನಾಂಕ 12-04-2012.

## <u>ಸಭಾಹ್ವಾನ ಪತ್ರ</u>

ದಿನಾಂಕ 19-04-2012 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀ ಹುಚ್ಚೇಗೌಡ, ಅಧ್ಯಕ್ಷರು, ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ, ಜಿಲ್ಲಾ ಪಂಚಾಯತ್, ಹಾಸನ ರವರ ಅಧ್ಯಕ್ಷತೆಯಲ್ಲಿ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯನ್ನು ಜಿಲ್ಲಾ ಪಂಚಾಯತ್ ಹೊಯ್ಸಳ ಸಭಾಂಗಣದಲ್ಲಿ ಕರೆಯಲಾಗಿದೆ.

ಆದುದರಿಂದ ಸದರಿ ಸಭೆಗೆ ತಾವುಗಳು ಹಾಜರಾಗಿ ಸಲಹೆ ಸಹಕಾರ ನೀಡಲು ಕೋರಲಾಗಿದೆ.

ಉಪ ಕಾರ್ಯದರ್ಶಿ(ಅಭಿವೃದ್ಧಿ),
ಹಾಗೂ ಕಾರ್ಯದರ್ಶಿ
ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯತ್, ಹಾಸನ.

<u>ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:-</u>

1) ಹಿಂದಿನ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಪರಾಮರ್ಶೆ.
2) ವಿವಿಧ ಇಲಾಖೆಗಳ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವುದು.
3) ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.

<u>ಪ್ರತಿಯನ್ನು:-</u>

1) ಶ್ರೀ ಹುಚ್ಚೇಗೌಡ, ಅಧ್ಯಕ್ಷರು, ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ, ಜಿಲ್ಲಾ ಪಂಚಾಯತ್, ಹಾಸನ.
2) ಶ್ರೀ ವಿ.ಎ.ನಂಜುಂಡಸ್ವಾಮಿ, ಸದಸ್ಯರು
3) ಶ್ರೀಮತಿ ಸುಭದ್ರ, ಸದಸ್ಯರು
4) ಶ್ರೀಮತಿ ಬಿ.ಜಯಶೀಲ ಜಯಶಂಕರ್, ಸದಸ್ಯರು
5) ಶ್ರೀಮತಿ ಸುಲೋಚನಾ ರಾಮಕೃಷ್ಣ, ಸದಸ್ಯರು

-2)